

# ಸವ್ಯಸಾಚಿ ಸುಭದ್ರಕ್ಕ

ಐದು ದಶಕಗಳಿಗೂ ಹೆಚ್ಚುಕಾಲ ಕನ್ನಡ ರಂಗಭೂಮಿಯ ಅಭಿನೇತ್ರಿಯಾಗಿ ಮೆರೆದ ಸುಭದ್ರಮ್ಮ ಮನ್ಸೂರ್ (1939–2020), ವೃತ್ತಿ ರಂಗಭೂಮಿಯ ಘನತೆ ಎತ್ತರಿಸಿದ ಅನನ್ಯ ಕಲಾವಿದೆ. ಆರನೇ ತರಗತಿಯವರೆಗಷ್ಟೇ ಓದಿದ್ದ ಬಳ್ಳಾರಿ ನೆಲದ ಈ ರಂಗಕಲಾವಿದೆಯ ಬದುಕು–ಸಾಧನೆಯ ಹರಹು ವಿಶ್ವವಿದ್ಯಾಲಯದಷ್ಟು ದೊಡ್ಡದು. ಜುಲೈ 15ರಂದು ನಿಧನರಾದ ಸುಭದ್ರಮ್ಮನವರು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಸದಾಕಾಲ ಜೀವಂತ.

■ **ಲಕ್ಷ್ಮಣದಾಸ್**

ಹಿರಿಯ ಕೀರ್ತನಕಾರರು, ತುಮಕೂರು

**2020**ರ ಫೆಬ್ರುವರಿ 28. 'ನಾಟಕ ರತ್ನ' ಗುಬ್ಬಿ ವೀರಣ್ಣ ಅವರ 'ಜೀವಿತ ನೆನಪಿನ ವೃತ್ತಿ ರಂಗಭೂಮಿಯ ಪೌರಾಣಿಕ ನಾಟಕೋತ್ಸವ'ದ ಕೊನೆಯ ದಿನ. ತುಮಕೂರಿನಲ್ಲಿ ಕಾರ್ಯಕ್ರಮ. ಅಂದು ಸಂಜೆ 6.30ಕ್ಕೆ ಸರಿಯಾಗಿ ಕಂದಗಲ್ಲ ಹನುಮಂತರಾಯರ ಶಕ್ತಪೂರ್ಣ ಲೇಖನಿಯಿಂದ ಮೂಡಿ ಬಂದ 'ರಕ್ತರಾತ್ರಿ' ನಾಟಕದಲ್ಲಿ ಅಭಿನಯ ಸಾಮ್ರಾಜ್ಞಿ, ಸಂಗೀತ ಸರಸ್ವತಿ ಸುಭದ್ರಮ್ಮ ಮನ್ಸೂರ್ ಅವರದ್ದು ದ್ರೌಪದಿಯ ಪಾತ್ರ. ಅಂದಮೇಲೆ ಕೇಳಬೇಕೆ? ಸಭಾಂಗಣದಲ್ಲಿ ಪ್ರೇಕ್ಷಕರು ಕಿಕ್ಕಿರಿದ್ದರು. ಅವರ ಅಭಿನಯಕ್ಕೆ ಚಪ್ಪಾಳೆಯ ಸುರಿಮಳೆ.

ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶ ಅಂದರೆ ಸಹಸ್ರ ಸಹಸ್ರ ಪ್ರದರ್ಶನ ಕಂಡ 'ರಕ್ತರಾತ್ರಿ' ನಾಟಕದ ದ್ರೌಪದಿಯ ಪಾತ್ರವನ್ನು ತಮ್ಮ ಬದುಕಿನುದ್ದಕ್ಕೂ ನಿರಂತರವಾಗಿ ಅಭಿನಯಿಸಿದ ಕೀರ್ತಿ ಸುಭದ್ರಮ್ಮ ಮನ್ಸೂರ್ ಅವರಿಗೆ ಮಾತ್ರ ಸಲ್ಲುತ್ತದೆ.

ಅಕ್ಕ ಸುಭದ್ರಮ್ಮ ಮನ್ಸೂರ್ ಅವರು ದ್ರೌಪದಿಯಾಗಿ ಮಾಲ ಕೌಂಸ್ ರಾಗದ 'ಹೇ ಮಾಧವ ಮಹಿಮಾ ಪೂರ್ಣ' ಗೀತೆಯನ್ನು ಭಾವಪೂರ್ಣವಾಗಿ ಹಾಡುತ್ತ ರಂಗಪ್ರವೇಶಿಸಿದರೆ, ಪ್ರೇಕ್ಷಕರಿಗೆ ಹಬ್ಬ! ಅವರು ರಂಗದ ಅಂಗಳಕ್ಕೆ ಬಂದ ಕೂಡಲೇ ಕುಳಿತ್ತಿದ್ದ ಪ್ರೇಕ್ಷಕರೆಲ್ಲ ಒಟ್ಟಿಗೆ ಎದ್ದು ನಿಂತು ಚಪ್ಪಾಳೆಯ ಸುರಿಮಳೆಗೈಯುತ್ತಿದ್ದರು.

ನಾಟಕ ಮುಗಿದ ಮೇಲೆ ಆ ತಾಯಿಯ ಸಂತೋಷ ಹೇಳತೀರದು. ಸಹಸ್ರ ಚಂದ್ರದರ್ಶನ ಕಂಡಂತೆ ಆ ವಾತಾವರಣ ನನಗೆ ಭಾಸವಾಗುತ್ತಿತ್ತು. ಮಾತನಾಡಲಾಗದೆ ಅಕ್ಕನ ಪಾದಗಳಿಗೆ ನಾನು ನಮಸ್ಕರಿಸುತ್ತಿದ್ದೆ.

ಅಂದು ನಾಟಕ ಮುಗಿದ ಮೇಲೆ ಟ್ರಸ್ಟಿನ ನಾವೆಲ್ಲರೂ ಅವರ ಜತೆ ಒಟ್ಟಿಗೆ ಊಟ ಮಾಡಿ ಬಳ್ಳಾರಿಗೆ ಬೀಳ್ಕೊಟ್ಟೆವು. ಅದೇ ಕಡೆ. ಮುಂದಿನ ದಿಕ್ಕೆಟ್ಟ ಈ ಕೊರೊನಾ ದಿನಗಳಲ್ಲಿ ಅವರೊಂದಿಗೆ ಒಂದು ದಿನ ಮಾತ್ರ ಮಾತನಾಡಿದ್ದೆ. ಈಗ ಅವರು ನಮ್ಮೊಂದಿಗೆ ಇಲ್ಲ.

ವೃತ್ತಿರಂಗಭೂಮಿ, ಹವ್ಯಾಸಿ, ಗ್ರಾಮೀಣ... ಹೀಗೆ ಎಲ್ಲ ಪ್ರಕಾರದ ರಂಗಭೂಮಿಯಲ್ಲಿಯೂ ವೈಭವ ಪೂರ್ಣ ಭಾವಪರವಶತೆಯಿಂದ ನಟಿಸುತ್ತಿದ್ದ ಮಹಾನಟಿ ಸುಭದ್ರಮ್ಮ ಮನ್ಸೂರ್.

ಒಂದು ಪ್ರಸಂಗವನ್ನಿಲ್ಲಿ ನೆನಪಿಸಿಕೊಳ್ಳಬೇಕು. 2014ರ ಅಕ್ಟೋಬರ್ 12ನೇ ತಾರೀಕು. ಬೆಂಗಳೂರಿನ ನಯನ ರಂಗಮಂದಿರದಲ್ಲಿ 'ಭಾಗವತರು ಬೆಂಗಳೂರು' ಆಯೋಜಿಸಿದ್ದ 'ನನ್ನ ಅಭಿನಂದನಾ ಸಮಾರಂಭ'. ಅದು ರಂಗಕೀರ್ತನ ಸಂಭ್ರಮ. ಅಂದು ಅಕ್ಕ ಸುಭದ್ರಮ್ಮ ಅವರ ರಂಗಗೀತೆಗಳ ಗಾಯನವೇ ಕಾರ್ಯಕ್ರಮದ ಪ್ರಮುಖ ಆಕರ್ಷಣೆ. ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷರಾದ ಶೇಖ್ ಮಾಸ್ತರ್ ಅವರಿಂದ ಹಾರ್ಮೋನಿಯಂ ಸಾಥ್. ಅಂದು ಅಕ್ಕ ಹಾಡಿದ 'ಲಂಚಾವತಾರ' ನಾಟಕದ ಎಚ್.ಕೆ.ಯೋಗಾನರಸಿಂಹ ಅವರ ಸಂಗೀತ ಸಂಯೋಜನೆಯ ಅಕ್ಕಮಹಾದೇವಿಯವರ ವಚನ, 'ಬೆಟ್ಟದಾ ಮೇಲೊಂದು ಮನೆಯ ಮಾಡಿ' ಸಭಿಕರಲ್ಲಿ ರೋಮಾಂಚನ ಮೂಡಿಸಿತ್ತು. ತಾಯಿಗೆ ಅಭಿನಂದನೆಗಳ ಮೇಲೆ ಅಭಿನಂದನೆ. ಅದೊಂದು ಎಂದೂ ಮರೆಯಲಾಗದ ಮಹಾಕ್ಷಣ.

ಗಾಯನವನ್ನು ಮುಂದುವರಿಸುತ್ತಲೇ ನಾಲ್ವಡಿ ಶ್ರೀಕಂಠಶಾಸ್ತ್ರಿಗಳ 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಪೀಲು ರಾಗದ 'ಮೋಕ್ಷ ಸದನ ಮೋಹ ಹರಣ', ಭೀಮಫಲಾಸ್ ರಾಗದ ಮತ್ತೊಂದು ಗೀತೆ 'ಮಲ್ಲಿನಾಥ ಧ್ಯಾನ, ಮಾಡು ನಿರಂತರ' ಗೀತೆಗಳು ಅಮ್ಮನ ಸುಸ್ವರದಿಂದ ಮೂಡಿದ ಒಡನೆಯೇ ಕ್ಷಣಕ್ಷಣಕ್ಕೂ ವಿಸ್ತಾರವಾಗುತ್ತಿದ್ದವು. ಆ ಹಾಡುಗಾರಿಕೆಯ ಮೋಡಿ ನಯನ ರಂಗಮಂದಿರದ ತುಂಬೆಲ್ಲ ತುಂಬಿತ್ತು. ಅವರ ಜತೆ ಬೆಂಗಳೂರು ಮತ್ತು ತುಮಕೂರಿನಲ್ಲಿ ನಡೆದ ಹಲವು ರಂಗಗೀತೆ ಸಂಗೀತ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿದ್ದೇನೆ. ಅದು ನನ್ನ ಸೌಭಾಗ್ಯ.

ಅವರಿಗೆ ತುಮಕೂರು ಅಂದರೆ ಪಂಚಪ್ರಾಣ. ಕಾರಣ, ಇದು ನಾಟಕ ರತ್ನ ಡಾ. ಗುಬ್ಬಿ ವೀರಣ್ಣ ಅವರ ನಾಡು. ನಟರತ್ನಾಕರ ಹಿರಣ್ಣಯ್ಯ ಅವರ ನೆಲೆವೀಡು. ಹಿರಣ್ಣಯ್ಯ ಮಿತ್ರಮಂಡಳಿಯಲ್ಲಿ ಸುಭದ್ರಮ್ಮ ಅವರದ್ದು ಅಕಳಂಕ ಸೇವೆ. 'ಲಂಚಾವತಾರ' ನಾಟಕದಲ್ಲಿ ಮನೋಜ್ಞ